

# 3

# ಕಾಯಕವೇ ಕೈಲಾಸ

# ಯುಗಾಂತರದ ಘೋಷಣೆ

“ಮಾನವನು ಪರಿಶ್ರಮಿಸಬೇಕು. ಪರಿಶ್ರಮದ ಜಯ ನಿಶ್ಚಿತ. ಪ್ರಯತ್ನದಿಂದ ಮಾನವನು ದೇವನಾಗಬಲ್ಲ... ಪರಿಶ್ರಮದಿಂದ ಬಡವನೂ ಜಯಶೀಲನಾಗುವನು. ನಾನು ಸಾಧಿಸಿದ ಈ ಕಾರ್ಯವನ್ನು ಬಡವನಾದವನೂ ಸಾಧಿಸಬಹುದು. ಆದರೆ ಆತನಿಗೆ ಧರ್ಮದಲ್ಲಿ ಶ್ರದ್ಧೆ ಮಾತ್ರ ಆವಶ್ಯಕ. ಈ ಕಾರ್ಯ ಬಲ್ಲಿದರಿಗೆ ಮಾತ್ರ ಸಾಧ್ಯ ಎಂದು ಯಾರೂ ತಿಳಿಯಲಾಗದು. ಬಡವರಾಗಲೀ ಬಲ್ಲಿದರಾಗಲೀ ಈ ಮಾತನ್ನು ನೆನೆಯಬೇಕಾದುದು ಆವಶ್ಯ. ನೀವು ಈ ಮಾತನ್ನು ಅನುಸರಿಸುವಿರಾದರೆ, ಈ ಘನಸಾಧನೆ ಬಹುಕಾಲ ಬಾಳೀತು. ಒಂದೂವರೆಯಷ್ಟು ಅಭಿವೃದ್ಧಿಯಾದೀತು.”

(ಮಸ್ಕಿಯಲ್ಲಿನ ಅಶೋಕನ ಶಾಸನ)

(ಕ್ರಿ.ಪೂ. 264 ರಿಂದ 224ರ ವರೆಗೆ ರಾಜ್ಯವಾಳಿದ ಮೌರ್ಯವಂಶದ ಪ್ರಸಿದ್ಧ ರಾಜ ಅಶೋಕ. ಅವನು ತನ್ನ ಆಡಳಿತಾವಧಿಯಲ್ಲಿ ದೇಶದಲ್ಲಿ ಹಲವು ಬಗೆಯ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡಿದ್ದನು. ಜನರಿಗೆ ಸಂದೇಶವನ್ನು ಸಾರುವ ಶಿಲಾಶಾಸನಗಳನ್ನು ಅಲ್ಲಲ್ಲಿ ಸ್ಥಾಪಿಸಿದ್ದನು. ‘ಮಸ್ಕಿ’ ಎಂಬಲ್ಲಿನ ಅಶೋಕನ ಶಾಸನದ ಕನ್ನಡ ಅನುವಾದವಿದು)

- ❐ ಅಶೋಕನ ಶಾಸನದ ಅನುವಾದವನ್ನು ಓದಿದಿರಲ್ಲವೇ? ಈ ಶಾಸನದ ಉದ್ದೇಶವೇನು? ಇಲ್ಲಿ ಅಶೋಕನು ಜನರಿಗೆ ನೀಡಿದ ಸಂದೇಶವೇನು? ವಿಶ್ಲೇಷಿಸಿ ಲಘು ಟಿಪ್ಪಣಿ ಬರೆಯಿರಿ.



# ಕಠಿಣ ಪರಿಶ್ರಮ ಕೀಳಲ್ಲ



ನಿಸರ್ಗ ನೀಡಿದ ಅದ್ಭುತ ಕೊಡುಗೆಯು
ನಿನ್ನೀ ಒಡಲಿದು ಮಾನವನೇ ।
ಕೈ ಕಾಲೆದೆ ತಲೆ ಮಾಂಸದ ಪೇಶಿಯು
ಉತ್ತಮ ದುಡಿಮೆಗೆ ಸಾಧನವೇ ।।

ಕೈ ಕೆಸರಾದರೆ ಬಾಯ್ಮೊಸರೆಂದರು
ನಮ್ಮೀ ನಾಡವರನುಭವದಿ ।
ಕಷ್ಟವ ಪಟ್ಟರೆ ಇಷ್ಟವು ದೊರೆವುದು
ಖಂಡಿತ ಬಾಳುವೆ ಸಂತಸದಿ ।।

ಕೆಲಸವ ಮಾಡಲು ಸೃಜಿಸಿದೆ ಸಾವಿರ
ಯಂತ್ರದ ಸೈನ್ಯವ ಜಗದೊಳಗೆ ।
ಆಲಸಿಯಾಗಿಹೆ ದುಡಿಯದೆ ತಿನ್ನುವ
ಮಂತ್ರವದೊಂದೇ ಮನದೊಳಗೆ ।।

ಬೆವರನು ಸುರಿಸುವ ಬಹುವಿಧ ದುಡಿಮೆಯು
ದೇಹಕೆ ಹಿತವದು ಖಂಡಿತವು ।
ದುಡಿಮೆಯು ಇಲ್ಲದೆ ದೇಹವು ದುಂಡಗೆ
ಬೆಳೆದರೆ ರೋಗವು ನಿಶ್ಚಿತವು ।।

ಕಠಿಣ ಪರಿಶ್ರಮಗೈಯುವ ಮನುಜನು
ಎಂದಿಗು ಯಾರಿಗು ಕೀಳಲ್ಲ ।
ಗೌರವಿಸವನನು । ಆದರಿಸವನನು ।
ಅವನಿಗೆ ಸಾಟಿಯು ಇನ್ನಿಲ್ಲ ।।

ದೇಹದ ಶಕ್ತಿಯೇ ದೇಶದ ಶಕ್ತಿಯು
ಬಾಲರೆ ಯುವಕರೆ ಎದ್ದೇಳಿ ।
ಸತತ ಪರಿಶ್ರಮ ದುಡಿಮೆಯ ಗೈಯುತ
ಸಾರ್ಥಕ ಜೀವನವನು ಬಾಳಿ ।।


– ನರಸಿಂಹ. ಕೆ. ಚಿಪ್ಪಾರು



- ❒ ಕವಿತೆಯನ್ನು ರಾಗವಾಗಿ ಹಾಡಿರಿ.
- ❒ ಪ್ರಾಸಪದಗಳನ್ನು ಆರಿಸಿ ಬರೆಯಿರಿ.
- ❒ ಈ ಕವನದ ಆಶಯವನ್ನು ಸರಳ ಗದ್ಯದಲ್ಲಿ ಬರೆಯಿರಿ.
- ❒ ಕಠಿಣ ಪರಿಶ್ರಮಗೈಯುವ ಜನರನ್ನು ಗೌರವಿಸಬೇಕು ಯಾಕೆ? ಟಿಪ್ಪಣಿ ತಯಾರಿಸಿರಿ.
- ❒ 'ದೇಹಶಕ್ತಿ ಬುದ್ಧಿಶಕ್ತಿ' ಇವುಗಳಲ್ಲಿ ಯಾವುದು ಮೇಲು? ಚರ್ಚಾಕೂಟಕ್ಕೆ ಪ್ರಬಂಧವೊಂದನ್ನು ಬರೆಯಿರಿ.
- ❒ ದುಡಿಮೆಯ ಹಿರಿಮೆಯನ್ನು ಸಾರುವ ಘೋಷಣವಾಕ್ಯಗಳನ್ನು ಬರೆಯಿರಿ.

## ಬದುಕುವ ದಾರಿ

ಒಂದು ಊರಿನಲ್ಲಿ ಅಮಿತ ಮತ್ತು ಅನಂತ ಎಂಬ ಅಣ್ಣತಮ್ಮಂದಿರಿದ್ದರು. ಎಳೆಯ ವಯಸ್ಸಿನಲ್ಲೆ ತಂದೆಯನ್ನು ಕಳೆದುಕೊಂಡ ಅವರನ್ನು ಸಲಹಲು ತಾಯಿ ತುಂಬ ಕಷ್ಟಪಟ್ಟಳು. ಇನ್ನೊಬ್ಬರ ಮನೆಯಲ್ಲಿ ಕೂಲಿ ನಾಲಿ ಮಾಡಿ ಗಳಿಸಿ ತಂದು ಮಕ್ಕಳನ್ನು ಚೆನ್ನಾಗಿ ಓದಿಸಿದಳು. ಅವರು ವಿದ್ಯಾಭ್ಯಾಸ ಮುಗಿದ ಮೇಲೆ ಏನಾದರೊಂದು ಉದ್ಯೋಗಕ್ಕೆ ಸೇರಿಕೊಂಡು ಮುಪ್ಪಿನಲ್ಲಿರುವ ತಾಯಿಯನ್ನು ಸುಖದಿಂದಿರಿಸಬೇಕಾದ್ದು ತಮ್ಮ ಕರ್ತವ್ಯವೆಂದೇ ತಿಳಿದರು. ಆದರೆ ಹಲವು ಕಡೆಗಳಿಗೆ ಹೋಗಿ ಕೇಳಿದರೂ ಏನಾದರೊಂದು ಕಾರಣದಿಂದ ಅವರಿಗೆ ಉದ್ಯೋಗ ಸಿಗದೇ ಹೋಯಿತು.




ಹೀಗಿರುವಾಗ ಲಕ್ಕಣ್ಣ ಸೆಟ್ಟಿ ಎಂಬ ಶ್ರೀಮಂತ ವ್ಯಾಪಾರಿಯು ನಗರದಲ್ಲಿ ಇರುವ ತನ್ನ ಅಂಗಡಿಯ ಮುಂದೆ, 'ವಿದ್ಯಾವಂತ ನಿರುದ್ಯೋಗಿಗಳಿಗೆ ಬದುಕುವ ದಾರಿ ತಿಳಿಸಿಕೊಡುತ್ತೇವೆ' ಎಂಬ ಫಲಕವನ್ನು ತೂಗಾಡಿಸಿದ್ದಾನೆಂದು ಅಮಿತನಿಗೆ ತಿಳಿಯಿತು. ಅವನು ತಮ್ಮನೊಡನೆ "ಬಾ, ನಾವು ನಗರಕ್ಕೆ ಹೋಗೋಣ. ಅಲ್ಲಿ ಲಕ್ಕಣ್ಣ ಸೆಟ್ಟಿಯನ್ನು ಕಂಡರೆ ಕೆಲಸವಾಗುತ್ತದೆ" ಎಂದು ಕರೆದ. ಅಣ್ಣತಮ್ಮಂದಿರಿಬ್ಬರೂ ಇರುವುದರಲ್ಲೇ ಒಳ್ಳೆಯ ಬಟ್ಟೆ ಧರಿಸಿಕೊಂಡರು. ತಾಯಿಯು "ಬುತ್ತಿ ಕಟ್ಟಿಕೊಡೋಣ ಎಂದರೆ ಒಂದು ಹಿಡಿ ಕಾಳು ಕೂಡ ಮನೆಯೊಳಗಿಲ್ಲ ಮಕ್ಕಳೇ, ಒಂದು ಮುಷ್ಠಿ ಹುರಿಗಡಲೆ ಮಾತ್ರ ಇದೆ. ಕಟ್ಟಿ ಕೊಡುತ್ತೇನೆ. ತೆಗೆದುಕೊಂಡು ಹೋಗಿ ಹಸಿವಾದರೆ ಇದನ್ನೇ ತಿಂದು ನೀರು ಕುಡಿದುಬಿಡಿ"



ಎಂದು ಮ್ಲಾನತೆಯಿಂದ ಹೇಳಿ ಅದನ್ನು ನೀಡಿದಳು.

ಅಣ್ಣ ತಮ್ಮಂದಿರು ಕಾಲ್ನಡಿಗೆಯಿಂದಲೇ ಸಾಗಿ ಮಧ್ಯಾಹ್ನ ನಗರವನ್ನು ತಲುಪಿದರು. ಅಲ್ಲಿ ಸೆಟ್ಟಿಯ ಅಂಗಡಿಗೆ ಹೋಗಿ ಅವನು ತೂಗಾಡಿಸಿದ ಫಲಕವನ್ನು ಓದಿದರು. ಬಳಿಕ ಅವನಿಗೆ ತಮ್ಮ ಪರಿಚಯ ಹೇಳಿ ತಮಗೆ ಬದುಕುವ ದಾರಿಯನ್ನು ತೋರಿಸಿಕೊಡಲು ಕೋರಿದರು. ಸೆಟ್ಟಿಯು ಅಲಕ್ಷ್ಯದಿಂದ ನಕ್ಕು, "ನೀವು ವ್ಯಾಪಾರದ ಬಿರುಸಿರುವಾಗ ಬಂದರೆ ಅದನ್ನು ತಿಳಿಸಲು ನನಗೆ ಸಮಯವೆಲ್ಲಿದೆ? ಸಂಜೆ ಬಂದು ಬಿಡಿ" ಎಂದನು.

'ನಾವು ಬಂದ ಗಳಿಗೆಯೇ ಸರಿಯಿಲ್ಲ' ಎಂದು ಅವರು ಮರಳಿ ಬಂದು, ಹುರಿಗಡಲೆ ತಿಂದು ನೀರು ಕುಡಿದು ಹಸಿವು ನೀಗಿಸಿಕೊಂಡರು. ಸಂಜೆ ಮತ್ತೆ ಸೆಟ್ಟಿಯ ಅಂಗಡಿಗೆ ಹೋದರು. ಅವನು "ನಾಳೆ ಬೆಳಿಗ್ಗೆ ಬನ್ನಿ, ಈಗ ಬಂದರೆ ನನಗೆ ಬಿಡುವಿಲ್ಲ. ಸ್ವಲ್ಪ ಬೇಗನೆ ಬರಬೇಕಿತ್ತು" ಎಂದನು.

ಅವರಿಬ್ಬರೂ ತಲೆಗೆ ಕೈ ಹೊತ್ತು ಮರಳಿದರು. ಅಣ್ಣ "ಇನ್ನು ಇಲ್ಲೇ ಕಾದು ನಿಂತರೆ ನಮ್ಮಲ್ಲಿ ಬಿಡಿಗಾಸೂ ಇಲ್ಲ. ಹಸಿವಿನಿಂದ ಸಾಯುವ ಪರಿಸ್ಥಿತಿ. ಸೆಟ್ಟಿಯನ್ನು ನೋಡಿದರೆ ಅವನು ನಮಗೆ ಉದ್ಯೋಗ ಸಿಗುವ ಉಪಾಯವನ್ನು ಸುಲಭದಲ್ಲಿ ತಿಳಿಸಿಕೊಡುವಂತೆ ಕಾಣುವುದಿಲ್ಲ. ಆದ್ದರಿಂದ ಬೇರೆಲ್ಲಾದರೂ ಉದ್ಯೋಗವನ್ನು ಅರಸಿಕೊಂಡು ಹೋಗೋಣವೆ?" ಎಂದು ಕೇಳಿದ. ಅನಂತ "ನಾವು ಇನ್ನೂ ಸ್ವಲ್ಪ ತಾಳ್ಮೆಯಿಂದ ಅವನ ದಾರಿ ಕಾದರೆ ಒಳ್ಳೆಯದೆಂದು ನನಗನಿಸುತ್ತದೆ. ನಾಳೆ ಬೆಳಿಗ್ಗೆ ಮತ್ತೆ ಹೋಗಿ ನೋಡೋಣ" ಎಂದು ಹೇಳಿದ.

ಅಮಿತ ಅದಕ್ಕೊಪ್ಪದೆ "ನೀನು ಬೇಕಿದ್ದರೆ ಅವನ ಅಂಗಡಿಗೆ ಎಡತಾಕುತ್ತಾ ಇರು. ನನಗೆ ನಿನ್ನಷ್ಟು ತಾಳ್ಮೆಯೂ ಇಲ್ಲ. ಬಾ ಇಲ್ಲೇ ಎಲ್ಲಾದರೊಂದು ಅಂಗಡಿಗೆ ಹೊಕ್ಕು ಏನಾದರೂ ಕದ್ದುಕೊಳ್ಳಲು ಪ್ರಯತ್ನಿಸುವ" ಎಂದು ಕರೆದ. ಅನಂತ ಅವನೊಂದಿಗೆ ಹೋಗಲಿಲ್ಲ. ಅಮಿತನೊಬ್ಬನೇ ಕದಿಯಲು ಹೋಗಿ ರಕ್ಷಕ ಭಟರ ಕೈಗೆ ಸಿಕ್ಕಿ ಸೆರೆಮನೆ ಸೇರಿದ.

ಮರುದಿನ ಅನಂತನು ಸೆಟ್ಟಿಯ ಅಂಗಡಿಗೆ ಹೋದಾಗಲೂ ಸೆಟ್ಟಿ ಅವನನ್ನು ಮತ್ತೆ ಬರಲು ಹೇಳಿದ. ಅನಂತ ಮರಳುವಾಗ ದಾರಿಯಲ್ಲಿ ಸಂತೆ ಸೇರಿತ್ತು. ಅನಂತನ ಕೊಳೆಯಾದ ಬಟ್ಟೆಯನ್ನು ನೋಡಿ ಒಬ್ಬ ಶ್ರೀಮಂತ ಅವನೊಂದಿಗೆ, "ಏನಪ್ಪಾ ನನ್ನ ಮನೆಯವರೆಗೆ ಇದೊಂದು ಪೆಟ್ಟಿಗೆ ತರುತ್ತೀಯಾ? ಕೂಲಿ ಕೊಡುತ್ತೇನೆ" ಎಂದ. ಅನಂತ ಸ್ವಲ್ಪ ಹೊತ್ತು ಯೋಚಿಸಿದ. ಬಳಿಕ ಪೆಟ್ಟಿಗೆಯನ್ನು ಹೊತ್ತುಕೊಂಡು ಅವನ ಮನೆಗೆ ಹೋದ. ಸಿಕ್ಕಿದ ಕೂಲಿಯಲ್ಲಿ ಹೊಟ್ಟೆ ತುಂಬಿಸಿಕೊಂಡ.

ದಿನವೂ ಬೆಳಿಗ್ಗೆ ಮತ್ತು ಸಂಜೆ ಅನಂತನು ಸೆಟ್ಟಿಯ ಅಂಗಡಿಗೆ ಹೋಗಿ 'ಮತ್ತೆ ಬಾ' ಎನ್ನುವ ಮಾತು ಕೇಳಿಸಿಕೊಂಡು ಮರಳುತ್ತಿದ್ದ. ಆದರೂ ತಾಳ್ಮೆಗೆಡಲಿಲ್ಲ. ಮರಳುವಾಗ ಅದೇ ಶ್ರೀಮಂತ ಅವನಿಗೆ ಕಾಣಿಸಿ ಏನಾದರೊಂದು ಕೆಲಸ ಹೇಳಿ ಕೂಲಿ ಕೊಡುತ್ತಿದ್ದ. ದಿನವೂ ಆತ ಹೆಚ್ಚು ಹೆಚ್ಚು ಕೆಲಸ ಹೇಳಿ ಕೂಲಿಯ ಮೊತ್ತವನ್ನು ಹೆಚ್ಚಿಸುತ್ತ ಬಂದ. ಅದರಿಂದ ಅನಂತನ ಹಸಿವು ನೀಗಿತಷ್ಟೇ ಅಲ್ಲ, ಕೈಯಲ್ಲಿ ಸ್ವಲ್ಪ ಸ್ವಲ್ಪವಾಗಿ ಹಣ ಸೇರತೊಡಗಿತು. ಶ್ರೀಮಂತನಿಗೂ ಅವನಲ್ಲಿ ಹಣ ಸೇರಿರುವುದು ತಿಳಿಯಿತು. ಆತ "ನಿನಗೆ ಇನ್ನೂ ಸ್ವಲ್ಪ ಹಣ ಕೊಡುತ್ತೇನೆ. ಇದರಿಂದ ಬೀದಿ ಬದಿಯಲ್ಲಿ ತಿಂಡಿ ತಯಾರಿಸಿ ಮಾರಲು ಅನುಕೂಲವಿರುವ ಒಂದು ಗಾಡಿಯನ್ನು ಕೊಂಡುಕೋ. ನನ್ನ ತೋಟದಲ್ಲಿ ದುಡಿಯುತ್ತಿರುವ ಕೆಲಸಗಾರರಿಗೆ ತಿಂಡಿ ತಯಾರಿಸಿ ಕೊಡು. ಬಂದ ಹಣದಲ್ಲಿ ಸ್ವಲ್ಪವನ್ನು ನನಗೆ ಹಿಂತಿರುಗಿಸಿದರೆ ನನ್ನ ಸಾಲವೂ ತೀರುತ್ತದೆ" ಎಂದ.






ಅನಂತನು ಅಂಗಡಿಯನ್ನು ಆರಂಭಿಸಿ ಒಳ್ಳೆಯ ಲಾಭ ಗಳಿಸಲಾರಂಭಿಸಿದ. ಆದರೂ ದಿನಕ್ಕೆರಡು ಬಾರಿ ಸೆಟ್ಟಿಯ ಅಂಗಡಿಗೆ ಹೋಗಿ 'ನಾಳೆ ಬಾ' ಎಂಬ ಉತ್ತರ ಪಡೆದು ಮರಳುವುದನ್ನು ಕೈ ಬಿಡಲಿಲ್ಲ. ಒಂದು ವರ್ಷದಲ್ಲಿ ಅವನು ಗಳಿಸಿದ ಅಪಾರ ಲಾಭದಿಂದ ಅಂಗಡಿಯೊಂದನ್ನು ಹಾಕಿದ. ವ್ಯಾಪಾರ ಆರಂಭಿಸಿದ ದಿನವೂ ಸೆಟ್ಟಿಯನ್ನು ಕಾಣಲು ಹೋದಾಗ ಅಲ್ಲಿ ಸೆಟ್ಟಿಯ ಬದಲು ತನಗೆ ನೆರವು ನೀಡಿದ ಶ್ರೀಮಂತನನ್ನು ಕಂಡು ಆಶ್ಚರ್ಯಚಕಿತನಾದ.

ಆಗ ಶ್ರೀಮಂತ ತಾನು ಧರಿಸಿದ ಕೃತಕ ಗಡ್ಡ ಮೀಸೆಗಳನ್ನು ತೆಗೆದು ಲಕ್ಕಣ್ಣ ಸೆಟ್ಟಿಯಾಗಿ ಅವನೆದುರಿಗೆ ನಿಂತ. "ಅಯ್ಯಾ, ನಾನು ನಿನ್ನನ್ನು ಪರೀಕ್ಷಿಸುವುದಕ್ಕಾಗಿಯೇ ಈ ವೇಷ ಧರಿಸಿದೆ. ಒಂದು ವರ್ಷದವರೆಗೂ ನೀನಿಲ್ಲಿಗೆ ಬರುವುದನ್ನು ಬಿಡಲಿಲ್ಲ. ನಿನ್ನ ತಾಳ್ಮೆ ಎಲ್ಲ ವಿದ್ಯಾವಂತ ಯುವಕರಲ್ಲೂ ಇರುವಂಥದ್ದಲ್ಲ. ಆಮೇಲೆ ಕಲಿತವನು ಎಂಬ ಹೆಮ್ಮೆಯಿಲ್ಲದೆ ಪ್ರಾಮಾಣಿಕವಾದ ಯಾವ ದುಡಿಮೆಗೂ ಸಿದ್ಧನೆಂಬುದನ್ನು ನೀನು ವ್ಯಕ್ತಪಡಿಸಿದ ಬಳಿಕ ನಿನಗೆ ಬದುಕುವ ದಾರಿ ತೋರಿಸಿಕೊಟ್ಟೆ. ಪರೀಕ್ಷೆಯಲ್ಲಿ ಗೆದ್ದು ನನ್ನ ಮನಸ್ಸು ಮೆಚ್ಚಿಸಿದ ನೀನು ಧನಿಕನಾಗಲು ಉದ್ಯೋಗದಲ್ಲಿ ನಿಷ್ಠೆಯೇ ಮುಖ್ಯ ಎಂದು ಅರಿತುಕೊಂಡೆಯಲ್ಲ. ನಿನ್ನ ಕಠಿಣ ಪರಿಶ್ರಮವನ್ನೂ ನಾನು ಮೆಚ್ಚಿಕೊಂಡಿದ್ದೇನೆ. ಇನ್ನು ನನ್ನೊಂದಿಗೆ ಇದ್ದು ನನ್ನ ವ್ಯಾಪಾರದಲ್ಲಿ ಪಾಲುದಾರನಾಗು" ಎಂದು ಪ್ರೀತಿಯಿಂದ ಹೇಳಿದನು.

❒ ಕಥೆಯಲ್ಲಿ ಬರುವ ಮಾತುಗಳನ್ನು ಕೆಳಗೆ ಕೊಡಲಾಗಿದೆ. ಅವುಗಳ ಸಂದರ್ಭ ಬರೆಯಿರಿ.

1) "ಒಂದು ಮುಷ್ಠಿ ಹುರಿಗಡಲೆ ಮಾತ್ರ ಇದೆ. ಕಟ್ಟಿಕೊಡುತ್ತೇನೆ"

2) "ನೀನು ಬೇಕಿದ್ದರೆ ಅವನ ಅಂಗಡಿಗೆ ಎಡತಾಕುತ್ತಾ ಇರು"

3) "ಅಯ್ಯಾ, ನಾನು ನಿನ್ನನ್ನು ಪರೀಕ್ಷಿಸುವುದಕ್ಕಾಗಿಯೇ ಈ ವೇಷ ಧರಿಸಿದೆ"

❒ 'ಬದುಕುವ ದಾರಿ' ಕಥೆಯಲ್ಲಿ ನಿಮಗೆ ಇಷ್ಟವಾದ ಭಾಗವನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

❒ ಸೆರೆಮನೆ ಸೇರಿದ ಅಮಿತನಿಗೆ ನೀವು ನೀಡುವ ಸಲಹೆಗಳೇನು? ಪತ್ರದ ಮೂಲಕ ಬರೆದು ತಿಳಿಸಿ.

❒ ಕಥೆಯನ್ನು ಮುಂದುವರೆಸಿ ಬರೆಯಿರಿ.

ಸೆರೆಮನೆಯಿಂದ ಹೊರಬಂದ ಬಳಿಕ ಅಮಿತ ಅನಂತನನ್ನು ಭೇಟಿಯಾಗುತ್ತಾನೆ. ಶ್ರಮಪಟ್ಟು ದುಡಿದು ಗಳಿಸಿ ಶ್ರೀಮಂತನಾದ ಅನಂತನನ್ನು ಕಂಡು ತಾನೂ ಅವನಂತೆ ಆಗಬೇಕು ಎಂದು ತೀರ್ಮಾನಿಸುತ್ತಾನೆ .....



# ಗಾರೆ ಕೆಲಸದಲ್ಲಿ ಸಾವಿತ್ರಿ ಎತ್ತಿದ ಕೈ



'ಗಾರೆಯ ಕೆಲಸ ಪುರುಷರಿಗೆ ಮಾತ್ರ ಸೀಮಿತ' ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಈ ಮಾತನ್ನೂ ಮೀರಿ ಸಾವಿತ್ರಿ ಎಂಬ ಹೆಸರಿನ ಮಹಿಳೆಯೊಬ್ಬರು ಈ ಕಠಿಣ ಕಾಯಕದಲ್ಲಿ ಸಕ್ರಿಯರಾಗಿದ್ದಾರೆ. ತಮ್ಮ ಕಲ್ಪನೆಯ ಸೌಧ ನಿರ್ಮಾಣದಲ್ಲಿ ಈ ಮಹಿಳಾಮಣಿಯ ದುಡಿಮೆಗೆ ಸಾಕಷ್ಟು ಬೇಡಿಕೆಯಿದೆ.

ಚೆರುವತ್ತೂರು ಪ್ಯೈಲಾಟಿಕುನ್ನು ನಿವಾಸಿ ಎಂ.ವಿ.ಸಾವಿತ್ರಿ ಅವರು 10 ವರ್ಷಗಳ ಹಿಂದೆ ಗಾರೆ ಕೆಲಸದಲ್ಲಿ ಸಹಾಯಕಿಯಾಗಿ ಈ ವಲಯಕ್ಕೆ ಬಂದಿದ್ದರು. ಅಲ್ಲಿಂದ ಕೆಲಸವನ್ನು ಬಹುಬೇಗನೆ ಕಲಿತುಕೊಂಡ ಆಕೆ ಮೂರೇ ವರ್ಷಗಳಲ್ಲಿ ಸ್ವತಂತ್ರವಾಗಿ ಕೆಲಸ ನಿರ್ವಹಿಸತೊಡಗಿ ಸಾರ್ವಜನಿಕರ ಅಚ್ಚರಿಗೆ ಕಾರಣರಾಗಿದ್ದಾರೆ. ಗಾರೆಯ ಕೆಲಸ ಮಾತ್ರವಲ್ಲದೆ, ಟೈಲ್ಸ್ ಲಗತ್ತಿಸುವ ಕಾರ್ಯ ಹಾಗೂ ಇಟ್ಟಿಗೆಗಳನ್ನು ಕಟ್ಟುವ ಕೆಲಸದಲ್ಲೂ ಈಕೆ ಸೈ ಎನಿಸಿಕೊಂಡಿದ್ದಾರೆ.

ಚೆರುವತ್ತೂರಿನ ಭಾನು ಎಂಬ ಗುತ್ತಿಗೆದಾರರ ಕೈ ಕೆಳಗೆ ಸಾವಿತ್ರಿ ದುಡಿಯುತ್ತಿದ್ದಾರೆ. ಸ್ಥಳೀಯ ವ್ಯಾಪಾರ ಭವನದ ಬಳಿಯ ಮೂರು ಅಂತಸ್ತಿನ ಕಟ್ಟಡದ ಗಾರೆಯ ಹೊಣೆಯನ್ನು ಈಕೆಯೇ ಹೊತ್ತುಕೊಂಡಿದ್ದಾರೆ.

"ಕೊಂಚ ಎದೆಗಾರಿಕೆ, ಯಾವ ವಿಚಾರವನ್ನೂ ಸ್ವೀಕರಿಸುವ ಛಲ, ಹಿಡಿದ ಕೆಲಸವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಕುರಿತು ಸ್ವಯಂ ನಂಬಿಕೆ, ಆತ್ಮವಿಶ್ವಾಸವಿದ್ದರೆ ಸಾಮಾನ್ಯ ಮಹಿಳೆಯರಿಗೂ ಯಾವ ಕ್ಲಿಷ್ಟ ಕಾರ್ಯವೂ ತ್ರಾಸವಾಗದು" ಎಂದು ಸಾವಿತ್ರಿ ವಿಶ್ವಾಸದಿಂದಲೇ ತಿಳಿಸುತ್ತಾರೆ. ಕೂಲಿಕಾರ್ಮಿಕರಾದ ಕೃಷ್ಣನ್ ಪೊದುವಾಳ್ ಈಕೆಯ ಪತಿ, ಸಜಿತ್ ಮತ್ತು ಸಜಿತಾ ಎಂಬ ಇಬ್ಬರು ಮಕ್ಕಳಿದ್ದಾರೆ.

- ❒ 'ಮನಸ್ಸಿದ್ದರೆ ಮಾರ್ಗ' ಈ ನಾಣ್ಣುಡಿ ಸಾವಿತ್ರಿಯ ದುಡಿಮೆಗೆ ಸರಿಹೊಂದುವುದೇ? ನಿಮ್ಮ ಅನಿಸಿಕೆಯನ್ನು ಬರೆಯಿರಿ.
- ❒ ನಿಮ್ಮೂರಿನಲ್ಲಿ ದೈಹಿಕ ಶ್ರಮವಹಿಸಿ ದುಡಿಯುವ ವ್ಯಕ್ತಿಯೊಬ್ಬರನ್ನು ಗುರುತಿಸಿ, ಅವರ ಅನುಭವಗಳನ್ನು ತಿಳಿದುಕೊಂಡು ವ್ಯಕ್ತಿಪರಿಚಯ ಬರೆಯಿರಿ.
- ❒ ದುಡಿಮೆಗೆ ಸಂಬಂಧಿಸಿ ನಮ್ಮ ಪ್ರಾದೇಶಿಕ ಸಮಸ್ಯೆ, ಕಾರಣ ಮತ್ತು ಪರಿಹಾರಗಳನ್ನು ಬಿಂಬಿಸುವ ಭಿತ್ತಿ ಪತ್ರಿಕೆಯನ್ನು ತಯಾರಿಸಿ ಪ್ರದರ್ಶಿಸಿರಿ.



❒ ಕೆಳಗಿನ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳನ್ನು ಸರಿಯಾಗಿ ಪ್ರಯೋಗಿಸಿ ಪುನಃ ಬರೆಯಿರಿ.

'ದುಡಿದು ತಿನ್ನು' ಎಂಬುದು ಹಿರಿಯರ ಮಾತು. ಕಷ್ಟ ಪಟ್ಟು ದುಡಿಯುವುದರಿಂದ ದೇಶ ಅಭಿವೃದ್ಧಿಯನ್ನು ಹೊಂದುತ್ತದೆ. ಸ್ವತಃ ಮಾಡಬಹುದಾದ ಕೆಲಸ. ಇತರರನ್ನು ಆಶ್ರಯಿಸುವುದು ಸರಿಯಲ್ಲ. ಹಿತ್ತಿಲು ತರಕಾರಿ ಬೆಳೆಸುವುದು, ತನ್ನ ಪರಿಸರ ಶುಚಿಯಾಗಿಡುವುದು. ತನಗೆ ಅಗತ್ಯವಾದ ಉಪಕರಣಗಳನ್ನು ತಯಾರಿಸುವುದು ಇತ್ಯಾದಿ ಕೆಲಸಗಳನ್ನು ಬಿಡುವಿನ ವೇಳೆ ಮಾಡಬಹುದು. ಜಪಾನಿನ ಜನರು ಈ ರೀತಿಯ ದುಡಿಮೆ ತಮ್ಮ ಪುಟ್ಟ ರಾಷ್ಟ್ರವನ್ನು ಅಭಿವೃದ್ಧಿ ತುತ್ತ ತುದಿಯಲ್ಲಿ ತಂದು ನಿಲ್ಲಿಸಿದ್ದಾರೆ. ಇದರಿಂದ ನಮಗೆ, ದುಡಿಯುವವನೇ ದೇಶ ನಿಜವಾದ ಸಂಪತ್ತು ಎಂದು ತಿಳಿಯಬಹುದು.

# ಮಣ್ಣು ಹೊನ್ನಾದಾಗ

## (ನಾಟಕ)

(ತೋಟದ ದೃಶ್ಯ. ಸುಮಾರು 40 ವರ್ಷ ಪ್ರಾಯದ ಮಹಿಳೆ ಪಾರ್ವತಿ ಕತ್ತಿಯಿಂದ ಕಳೆ ಗಿಡಗಳನ್ನು ಕಡಿಯುವ ಕೆಲಸ ಮಾಡುತ್ತಿರುತ್ತಾಳೆ. ಜೊತೆಗೆ 3–4 ಕೆಲಸಗಾರರೂ ದುಡಿಯುತ್ತಿದ್ದಾರೆ. ಅಲ್ಲಿಗೆ ಕೃಷಿ ವಿಚಾರ ವಿನಿಮಯ ಕೇಂದ್ರದ ಕಾರ್ಯಕರ್ತರಾದ ಮೀನಾ ಮತ್ತು ನೈನಾ ತಲುಪುತ್ತಾರೆ. ನೈನಾ ವೀಡಿಯೋ ಶೂಟಿಂಗ್ ಮಾಡಿಕೊಳ್ಳುತ್ತಾಳೆ)

### ದೃಶ್ಯ – ೧

| | | |
|---|---|---|
| ಮೀನಾ | : | ನಮಸ್ಕಾರ, ಪಾರ್ವತಮ್ಮ.............! |
| ಪಾರ್ವತಿ | : | (ಫಕ್ಕನೆ ಹಿಂತಿರುಗಿ ನೋಡಿ) ನಮಸ್ಕಾರ . ನಮಸ್ಕಾರ! ........ ನೀವು?......! |
| ನೈನಾ | : | ನಾನು ನೈನಾ. ಇವಳು ಮೀನಾ. ನಾವು ಪ್ರಗತಿ ಕೃಷಿ ವಿಚಾರ ವಿನಿಮಯ ಕೇಂದ್ರದಿಂದ ಬಂದಿದ್ದೇವೆ. |
| ಪಾರ್ವತಿ | : | ಹೌದಾ! ಆಗ್ಲೇ ಬಂದ್ರಾ! |
| ಮೀನಾ | : | ಇಲ್ಲ! ಸ್ವಲ್ಪ ಹೊತ್ತಾಯ್ತಷ್ಟೆ. (ನೈನಾ ಚಿತ್ರೀಕರಣ ಮಾಡುವಳು) |
| ಪಾರ್ವತಿ | : | ಅಯ್ಯೋ! ಮನೆಯಲ್ಲಿ ಮಕ್ಕಳಿದ್ರು. ನಿಮ್ಮನ್ನು ವಿಚಾರಿಸಿದ್ರಾ? ಬಾಯಾರಿಕೆ ಕೇಳಿದ್ದಾರಷ್ಟೆ? ಕರೆದರೆ ನಾನೇ ಬಿಡುವು ಮಾಡಿ ಅಲ್ಲಿಗೆ ಬರುತ್ತಿದ್ದೆ! ನಿಮಗೆ ತುಂಬಾ ಶ್ರಮವಾಯಿತೇ.....? |
| ಮೀನಾ | : | ಪರವಾಗಿಲ್ಲಮ್ಮಾ! ನಿಮ್ಮ ಶ್ರಮಕ್ಕೆ ಹೋಲಿಸಿದರೆ ಇದೇನು ಮಹಾ? |



ನೈನಾ : ಪಾರ್ವತಿ ಈ ತೋಟ ಕಂಡ ಮೇಲೆ ಅನ್ನಿಸುತ್ತಿದೆ ಇಲ್ಲಿಗೆ ಬರುವ ಸಂದರ್ಭ ಲಭಿಸಿದುದೇ ನಮ್ಮ ಪುಣ್ಯವೆಂದು. ಎಂತಹ ಸುಂದರ ನೋಟ! ಏನು ತಂಪು! ಹುಲುಸಾಗಿ ಬೆಳೆದ ತೆಂಗು, ಕಂಗು, ಬಾಳೆ, ಕರಿಮೆಣಸು, ಕೊಕ್ಕೊ......! ..... ಏನುಂಟು! ಏನಿಲ್ಲ! ನಿಜವಾದ ತೋಟವೊಂದನ್ನು ಕಾಣುವಂತಾಯಿತಲ್ಲ! ಅದಕ್ಕಾಗಿ ಸಂತೋಷಪಡುತ್ತಿದ್ದೇವೆ.

(ಮೀನಾ ತೋಟದ ಚಿತ್ರೀಕರಣ ಮುಂದುವರಿಸುವಳು)

ಪಾರ್ವತಿ : ನಾವು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದೇವೆ. ಪ್ರಕೃತಿ ಮೆಚ್ಚಿ ಒಲಿದಿದೆ. ಅಷ್ಟೇ....!

ಮೀನಾ : ಕೃಷಿಯಾಗಲೀ ಯಾವುದೇ ಕಸುಬಾಗಲೀ ಸಕಾಲದಲ್ಲಿ ಶ್ರದ್ಧೆಯಿಂದ ಮಾಡುವವರು ಈಗಿನ ಕಾಲದಲ್ಲಿ ಕಡಿಮೆಯಾಗಿದ್ದಾರೆ. ಅಂತಹದರಲ್ಲಿ ನೀವು ಶ್ರಮಪಟ್ಟು ದುಡಿದು ಈ ತೋಟವನ್ನು ನಂದನವನವನ್ನಾಗಿಸಿದ್ದೀರಲ್ಲ......!

ಪಾರ್ವತಿ : ದುಡಿಮೆಗೆ ಮೆಚ್ಚುವುದೇ ಮಣ್ಣಿನ ಮಹಿಮೆ.

ನೈನಾ : ನಿಮಗೆ ಈ ಕಾರ್ಯಕ್ಕೆ ಪ್ರೇರಣೆ.......?

ಪಾರ್ವತಿ : ಖಂಡಿತವಾಗಿಯೂ ನನ್ನ ಪತಿ ಶಂಕರರಾಯರೇ ಇದಕ್ಕೆ ಪ್ರೇರಣೆ. ಆಲಸಿಯಾದ ನನ್ನ ಕಣ್ಣುತೆರೆಸಿದರು.

ಮೀನಾ : ಏನು! ನೀವೂ ಆಲಿಸಿಯಾಗಿದ್ದಿರೇ......? ಅಂದ್ರೆ........?





ಪಾರ್ವತಿ : ಅದು ಒಂದು ದೊಡ್ಡ ಕಥೆ. ಹೇಳ್ತೇನೆ ಕೇಳಿ

(ನೆಲದಲ್ಲಿ ಕುಳಿತುಕೊಳ್ಳುವರು.)

## ದೃಶ್ಯ – ೨

(ಸಣ್ಣ ಹಂಚಿನ ಮನೆ. ಮನೆಯ ಯಜಮಾನಿ ಪಾರ್ವತಿ 25 ವರ್ಷ ಪ್ರಾಯ. ಸಂಜೆಯ ಹೊತ್ತು ಬಟ್ಟೆ ಹೊಲಿಯುತ್ತಿದ್ದಾಳೆ. ಗಂಡ ಶಂಕರ ತೋಟದಿಂದ ಕೆಲಸ ಮುಗಿಸಿ ಬೈರಾಸಿನಿಂದ ಮುಖ ಒರಸಿಕೊಳ್ಳುತ್ತಾ ಬರುತ್ತಾನೆ. ಸಮೀಪದಲ್ಲಿದ್ದ ಮರದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ.)

ಶಂಕರ : ಪಾರೂ ............. ಹೇಗಾದ್ರೂ ತೋಟಕ್ಕೆ ನೀರು ಹಾಯಿಸುವ ಕೆಲಸ ಆಗಿ ಹೋಯ್ತು.

ಪಾರ್ವತಿ : .................... (ಕೋಪ ಬಂದವಳಂತೆ ನಟಿಸುವುದು)

ಶಂಕರ : ಏನೇ.......! ಮೌನ!

ಪಾರ್ವತಿ : ಅದು ಮುಗಿದರೆ ಬೇರೊಂದು ಕೆಲಸ ಇದ್ದೇ ಇದೆಯಲ್ಲಾ! ಅದಕ್ಕೆ ಕೊನೆಯಿಲ್ಲವಷ್ಟೇ.......!

ಶಂಕರ : ಅಯ್ಯೋ! ಕೃಷಿಕನಿಗೆ ಕೆಲಸ ಮುಗಿಯುವುದೆಂದಿಲ್ಲ. ಸರಿ, ಮುಗಿಯಬಾರದೂ ಕೂಡಾ. ಹಾಗಿದ್ದರೇನೇ ನೆಮ್ಮದಿ. ಯಶಸ್ಸು ತಿಳಿಯಿತೇ? ಕೆಲಸ ಬೇಕು ಎಂದು ಎಷ್ಟು ಮಂದಿ ಹಂಬಲಿಸುತ್ತಾರೆ! ಗೊತ್ತಿದೆಯೇ?

ಪಾರ್ವತಿ : ಸಾಕು ನಿಮ್ಮ ಉಪದೇಶ. ದಿನಾ ಇದ್ದದ್ದೇ. ಮದುವೆಯಾಗಿ ಮೂರು ವರ್ಷವಾಯಿತು. ನಾನು ಈ ಮನೆಲೇ ಬಿದ್ದಿರಬೇಕು. ಒಂದು ಕಡೆಗೂ ಹೋದದ್ದಿಲ್ಲ. ಒಮ್ಮೆ ಪೇಟೆ ಕಡೆ ಸುತ್ತಾಡಿಕೊಂಡು ಬರೋಣವೆಂದು ಕೇಳಿಕೊಂಡರೆ ನಿಮಗೆಲ್ಲಿ ಮನಸ್ಸಿದೆ.

ಶಂಕರ : ಪಾರು..............! ಖಂಡಿತ ಹೋಗೋಣ ಅದಕ್ಕೇನಂತೆ ಆದ್ರೆ ನೋಡು ಈಗ ಸ್ವಲ್ಪ ಹೆಚ್ಚು ಕೆಲಸ ಅಲ್ಲವೇ...... ಹಾಗೆ......

ಪಾರ್ವತಿ : ಸಾಕು ನಿಮ್ಮ ಮಾತು. ಬಾಯಾರಿಕೆ ತರುತ್ತೇನೆ.

(ಒಳಗೆ ಪ್ರವೇಶಿಸುವಳು. ಮಾಧವಣ್ಣನ ಪ್ರವೇಶ. 70 ವರ್ಷ ಪ್ರಾಯ. ಶಂಕರ ಎದ್ದು ಹೋಗಿ ಮಾಧವಣ್ಣನನ್ನು ಸ್ವಾಗತಿಸುವನು.)

ಶಂಕರ : ನಮಸ್ಕಾರ ಮಾಧವಣ್ಣ. ಬನ್ನಿ ಬನ್ನಿ ಕುಳಿತುಕೊಳ್ಳಿ. (ನಿಂತು ಕೊಂಡೇ ಇದ್ದು) ಏನು ಸಮಾಚಾರ ಮಾಧವಣ್ಣ ಆರಾಮ ತಾನೇ?

ಮಾಧವಣ್ಣ : ನಾನು ಕೆಲದಿನದಿಂದ ನಿನ್ನನ್ನು ಕಾಣಬೇಕೆಂದಿದ್ದೆ. ನೀನು ಸಿಗಲಿಲ್ಲ. ಹಾಗೇ ನೇರ ಬಂದು ಬಿಟ್ಟೆ.



ಶಂಕರ : ಅಯ್ಯೋ ಸುದ್ದಿ ತಿಳಿಸುತ್ತಿದ್ದರೆ ನಾನೇ ಬರುತ್ತಿದ್ದೆನಲ್ಲ. ನಿಮಗೆ ಬಾಯಾರಿಕೆ.......... (ಒಳಗೆ ಹೋಗಿ ಬರುವನು. ಪಾರ್ವತಿ ಲೋಟಗಳಲ್ಲಿ ಪಾನೀಯ ಮತ್ತು ತಟ್ಟೆಯಲ್ಲಿ ಬಾಳೆಹಣ್ಣು ತಂದು ಇರಿಸಿ ಕ್ಷೇಮ ಸಮಾಚಾರ ವಿಚಾರಿಸುವಳು)

ಪಾರ್ವತಿ : ಮಾಧವಣ್ಣ ಹೇಗಿದ್ದೀರಾ? ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ?

ಮಾಧವಣ್ಣ : ಎಲ್ಲರೂ ಕ್ಷೇಮವಮ್ಮಾ..... ಶಂಕರನನ್ನು ಕಾಣಬೇಕಿತ್ತು. ಹಾಗೆ ಬಂದು ಬಿಟ್ಟೆ.

ಶಂಕರ : ತಾವು ನನ್ನನ್ನು ಕಾಣಬೇಕೆಂದಿದ್ದ ಉದ್ದೇಶ ...............?

ಮಾಧವಣ್ಣ : ನೋಡು ಶಂಕರ! ಸರಕಾರ ಭೂ ಮಸೂದೆ ಜಾರಿಗೆ ತಂದ ವಿಷಯ ನಿನಗೆ ತಿಳಿದಿದೆ. ಆ ಪ್ರಕಾರ ಪರಿಹಾರ ನೀಡಿದರೆ ಭೂಮಿ ನಿನ್ನದಾಗುವುದು. ಆದರೆ ನಾನು ನೀಡಿದ ಮಣ್ಣನ್ನು ನೀನು ಚಿನ್ನವಾಗಿಸಿದೆ. ಅದ್ಭುತ ಕೃಷಿ ಮಾಡಿದೆ. ಅದಕ್ಕೆ ಮೆಚ್ಚಿ ಯಾವುದೇ ಪರಿಹಾರ ಪಡೆಯದೇ ಭೂಮಿಯನ್ನು ನಿನಗೆ ಬರೆದುಕೊಡುತ್ತೇನೆ. ನಿನ್ನಂತೆಯೇ ಕೃಷಿ ಮಾಡುವವರಿಗೆ ಭೂಮಿ ದಕ್ಕಿದರೆ ಸಾರ್ಥಕ. ಅದನ್ನು ಹೇಳಲು ಇಲ್ಲಿಯವರೆಗೆ ಬಂದೆ. ತೆಗೆದುಕೋ ಈ ರಿಕಾರ್ಡು.

ಶಂಕರ : ಏನಿದು ಮಾಧವಣ್ಣ! ಛೇ ಹಾಗೆ ಮಾಡಬೇಡಿ! ಸರಕಾರ ನಿಶ್ಚೈಸಿದ ಪರಿಹಾರದಷ್ಟನ್ನಾದರೂ ನೀವು ತೆಗೆದುಕೊಳ್ಳಬೇಕು.

ಮಾಧವಣ್ಣ : ನೀನು ಚಿಂತೆ ಮಾಡಬೇಡ. ನಾನು ನಿನ್ನಿಂದ ಏನನ್ನೂ ಸ್ವೀಕರಿಸಲಾರೆ. ಹಾಗೂ ಬೇಕಿದ್ದರೆ ಯಾವುದಾದರೂ ಅನಾಥಾಲಯಕ್ಕೆ ದಾನ ಕೊಟ್ಟುಬಿಡು. ನನಗೆ ಸಂತೋಷ. ನಾನಿನ್ನು ಬರುತ್ತೇನೆ.


ಶಂಕರ : ಆಯಿತು. ನಾನೇನು ಮಾಡಲಿ ನಿಮ್ಮಿಚ್ಛೆ ಹಾಗೆಯೇ ಮಾಡುತ್ತೇನೆ. (ಮಾಧವಣ್ಣ ಹೋಗುವರು. ಶಂಕರ, ಪಾರ್ವತಿ ಕೈ ಮುಗಿದು ಬೀಳ್ಕೊಡುವರು)

## ದೃಶ್ಯ – ೩

(ಮನೆಯ ದೃಶ್ಯ. ಬಸ್ ಅಪಘಾತದಲ್ಲಿ ಮರಣಹೊಂದಿದ ಶಂಕರಣ್ಣನ ಆಸ್ತಿಯ ಬಗ್ಗೆ ತಿಳಿಸಲು ವಕೀಲ ರಂಗಸ್ವಾಮಿ ಮನೆಗೆ ಬರುತ್ತಾರೆ. ಸೋಫಾದಲ್ಲಿ ಕುಳಿತ ವಕೀಲ ರಂಗಸ್ವಾಮಿ. ಪಾರ್ವತಿ (ದುಃಖದಿಂದ) ಎದುರು ಕುಳಿತಿದ್ದಾರೆ. ಬೆಂಚಿನಲ್ಲಿ ಕೆಲಸದವರಾದ ಬಾಬಣ್ಣ, ರಾಧಣ್ಣ ಮತ್ತು ರಾಜಣ್ಣ ಇದ್ದಾರೆ. ಪುಟ್ಟ ಮಕ್ಕಳು. ಅತ್ತಿತ್ತ ಹೋಗುತ್ತಿರುವರು)

ರಂಗಸ್ವಾಮಿ : (ಸಮಾಧಾನಪಡಿಸುತ್ತಾ) ಪಾರ್ವತಮ್ಮಾ ದುಃಖಿಸಬೇಡಿ! ದುಃಖವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮನು ನಿಮಗೆ ಕರುಣಿಸಲಿ. ವಿಧಿಯಾಟವನ್ನು





ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ನಾವು ಯಾರೂ ಶಾಶ್ವತವಲ್ಲ. ಬದುಕಿದ್ದ ಕಾಲದಲ್ಲಿ ಆದರ್ಶ ವ್ಯಕ್ತಿಯಾಗಿ ಬಾಳಿದವರು ಶಂಕರಣ್ಣ. ಅವರು ಬಸ್ಸು ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿರುವಾಗ ನನ್ನನ್ನು ಕರೆಸಿ ತಮ್ಮ ಚರ ಮತ್ತು ಸ್ಥಿರ ಆಸ್ತಿಯ ಬಗ್ಗೆ ಎಲ್ಲಾ ವಿವರಗಳನ್ನು ನಿಮಗೆ ತಿಳಿಸಬೇಕು; ನಿಮಗೆ ಸೂಕ್ತ ಮಾರ್ಗದರ್ಶನವೀಯಬೇಕು ಎಂದು ಕೇಳಿಕೊಂಡರು. ಹಾಗೆ ನಿಮ್ಮನ್ನು ಕಾಣಲು ನಾನಿಲ್ಲಿಗೆ ಬಂದೆ.

ಪಾರ್ವತಿ : ಏನು ಆಸ್ತಿ! ಇದೆಲ್ಲ ಯಾರಿಗಾಗಿ? ಅವರು ಬದುಕಿದ್ದಾಗ ನಾನು ಅವರನ್ನು ಅರ್ಥಮಾಡಿಕೊಳ್ಳಲಿಲ್ಲ. ಅವರಿಗೆ 'ದುಡಿಮೆಯೇ ದೇವರು', ತಮ್ಮ ಜೀವನದ ಒಂದು ಕ್ಷಣವನ್ನು ಹಾಳುಮಾಡಿದವರಲ್ಲ. ಅಂಥವರನ್ನು ಕಳೆದುಕೊಂಡ ದುಃಖವನ್ನು ಸಹಿಸಿಕೊಳ್ಳಲು ನನ್ನಿಂದ ಸಾಧ್ಯವಾಗುತ್ತಿಲ್ಲ (ಅಳುವಳು)

ರಂಗಸ್ವಾಮಿ : ಪಾರ್ವತಮ್ಮ! ನೀವು ಹೀಗೆ ದುಃಖಿಸಿದರೆ ಹೇಗೆ? ಜೀವನದಲ್ಲಿ ಅದ್ಭುತ ಸಾಧನೆಯನ್ನು ಮಾಡಿದವರು ನಿಮ್ಮ ಪತಿವರ್ಯರು. ಅವರಿಲ್ಲವೆಂದು ದುಃಖಿಸುವುದು ಸರಿಯಲ್ಲ. ಅವರು ಮಾಡಿದ ಕೃಷಿ ಜೀವಂತವಾಗಿದೆ. ಅದನ್ನು ನೀವು ಮುಂದುವರಿಸುವುದರಿಂದಲೇ ಶಂಕರಣ್ಣನ ಆತ್ಮಕ್ಕೆ ಶಾಂತಿ ಸಿಗುವುದು.

ಪಾರ್ವತಿ : ವಕೀಲರೇ, ನೀವು ನಿಜವನ್ನೇ ಹೇಳಿದಿರಿ. ಖಂಡಿತವಾಗಿಯೂ ನಾನು ಅವರು ಬೆಳೆಸಿದ ಈ ತೋಟವನ್ನು ಇನ್ನೂ ಉತ್ತಮಪಡಿಸಿ ಅವರ ಅಭಿಲಾಷೆಯನ್ನು ಪೂರೈಸುತ್ತೇನೆ. ಇದು ನನ್ನ ತೀರ್ಮಾನ.

ಬಾಬಣ್ಣ : ಪಾರ್ವತಮ್ಮ! ನೀವೇನೂ ಹೆದರಬೇಡಿ! ನಾನು ಉದ್ಯೋಗಕ್ಕಾಗಿ ಮುಂಬೈಯಂತಹ ನಗರಗಳಲ್ಲಿ ಸುತ್ತಾಡಿ, ಅಮೂಲ್ಯ ಸಮಯವನ್ನು ಕಳೆದು

ಕೊನೆಗೆ ಸೋತು ಸುಣ್ಣವಾದೆ. ಸಾಲಗಾರರಿಂದ ತಪ್ಪಿಸಿಕೊಂಡು ಊರಿಗೆ ಬಂದಾಗ, ನನ್ನಲ್ಲಿ ಧೈರ್ಯತುಂಬಿ ನನ್ನನ್ನು ಈ ದಾರಿಗೆ ತಂದವರು ಶಂಕರ ರಾಯರು. ಅಂದಿನಿಂದ ನನ್ನ ಭಾಗ್ಯದ ಬಾಗಿಲು ತೆರೆಯಿತು. ಸಾಲ ತೀರಿಸಿ ಸಂತೃಪ್ತಿಯ ಜೀವನ ನಡೆಸಲು ಕಲಿಸಿಕೊಟ್ಟ ಶಂಕರರಾಯರ ಕೃಷಿಯನ್ನು ಹಾಗೆಯೇ ಮುಂದುವರಿಸಲು ನಾನು ನಿಮ್ಮೊಂದಿಗೆ ದುಡಿಯುತ್ತೇನೆ. ಖಂಡಿತ ಧೈರ್ಯವಾಗಿರಿ!

ರಾಧಣ್ಣ ಮತ್ತು ರಾಜಣ್ಣ : ನಾವೂ ಜೊತೆಗಿದ್ದೇವೆ.

ರಂಗಸ್ವಾಮಿ : ನೋಡಿ ಪಾರ್ವತಮ್ಮ. ಶಂಕರಣ್ಣನ ಆಸ್ತಿಗಳ ದಾಖಲೆಗಳು ಮತ್ತು ಅದರ ವಿವರ ಇಲ್ಲಿದೆ. ತನ್ನ ಕಠಿಣ ಪರಿಶ್ರಮದಿಂದ ಸಂಪಾದಿಸಿ ಉಳಿಸಿದ ಹಣವನ್ನು ನಿಮ್ಮ ಹೆಸರಿಗೆ ಬರೆದುಕೊಟ್ಟ ಪತ್ರವಿದು. ಇನ್ನು ಅವರ ಹೆಸರಿನಲ್ಲಿ ವಿಮೆ ಮಾಡಿದ್ದಾರೆ. ಅದನ್ನು ತೆಗೆಸಿಕೊಡುವ ಜವಾಬ್ದಾರಿಯನ್ನು ನನಗೆ ವಹಿಸಿದ್ದಾರೆ.

ಪಾರ್ವತಿ : (ಕಣ್ಣೊರಸಿ ಅಳುತ್ತಾಳೆ)

ರಂಗಸ್ವಾಮಿ : ಕೃಷಿ ಉತ್ತಮಪಡಿಸಬೇಕು. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಬೇಕು. ಮಾತ್ರವಲ್ಲದೆ ನನ್ನೊಂದಿಗೆ ದುಡಿದ ಕೆಲಸದವರಿಗೆ ಮನೆ ನಿರ್ಮಾಣಕ್ಕೆ ಸಹಾಯಧನವಾಗಿ ಸ್ವಲ್ಪಾಂಶವನ್ನು ಕೊಡಬೇಕು ಎಂದು ತಿಳಿಸಲು ಹೇಳಿದ್ದರು.

ಪಾರ್ವತಿ : ಅವರ ಆಸೆಯನ್ನು ಖಂಡಿತಾ ನೆರವೇರಿಸುತ್ತೇನೆ.

ರಂಗಸ್ವಾಮಿ : (ಸೀಯಾಳ ಕುಡಿದು ಆದ ಮೇಲೆ) ಹಾಗಿದ್ದರೆ ನಾನಿನ್ನು ಬರುತ್ತೇನೆ.

(ಎಲ್ಲರೂ ಬೀಳ್ಕೊಡುವರು)

## ದೃಶ್ಯ – ೪

(ತೋಟದಲ್ಲಿ ನೆಲದ ಮೇಲೆ ಕುಳಿತು ಪಾರ್ವತಮ್ಮನ ಕಥೆ ಕೇಳುತ್ತಿರುವ ನೈನಾ. ಮೀನಾ ವೀಡಿಯೋ ಚಿತ್ರೀಕರಿಸುವಳು. ಕೆಲಸದವರು ದುಡಿಯುತ್ತಿರುವರು.)

ಪಾರ್ವತಿ : ಅಂದಿನಿಂದ ನಾನು ಈ ತೋಟದಲ್ಲಿ ದುಡಿಯುತ್ತಿದ್ದೇನೆ. ನನಗಿಂತಲೂ ಶ್ರದ್ಧೆಯಿಂದ ದುಡಿಯುವ ಕೆಲಸಗಾರರು ನನ್ನೊಂದಿಗಿದ್ದಾರೆ. ಈ ತೋಟ ನಮ್ಮ ಪರಿಶ್ರಮದ ಫಲ.

ನೈನಾ : ನಿಮ್ಮ ತೋಟವನ್ನು ಈ ರೀತಿ ಮಾಡುವಲ್ಲಿ ಕೆಲಸಗಾರರ ಶ್ರದ್ಧೆಯೂ ಇದೆಯೆಂದು ನೀವು ಒಪ್ಪುತ್ತೀರಲ್ಲ.

ಪಾರ್ವತಿ : ಖಂಡಿತವಾಗಿಯೂ! ಮರಹತ್ತುವುದು, ಅಡಿಕೆ ಕೊಯ್ಯುವುದು, ಮದ್ದು ಬಿಡುವುದು ಮುಂತಾದ ಪ್ರಯಾಸದ ಕೆಲಸಗಳನ್ನು ಮಾಡುವುದರಲ್ಲಿ ಇಂದು ಜನರ ಒಲವು ಕಡಿಮೆಯಾಗುತ್ತಿದೆ. ಆದರೆ ನನ್ನ ಗಂಡ ಕೃಷಿ ಮಾಡಲು



ಆರಂಭಿಸಿದಂದಿನಿಂದ ಅವರೊಂದಿಗೆ ಹೆಗಲಿಗೆ ಹೆಗಲುಕೊಟ್ಟು ದುಡಿದ ಕಠಿಣ ಪರಿಶ್ರಮಿಗಳು ಬಾಬಣ್ಣ, ರಾಧಣ್ಣ ಮತ್ತು ರಾಜಣ್ಣ. ಈ ಎಲ್ಲಾ ಕೆಲಸಗಳನ್ನು ಮಾಡಿಕೊಂಡು ತಮ್ಮದೇ ಕೃಷಿ ಎಂದು ಭಾವಿಸಿ ಇವರು ದುಡಿದಿದ್ದಾರೆ. ಅವರು ಬಯಸಿದ ಸಂಬಳ ಸೌಕರ್ಯ ಕೊಟ್ಟಿದ್ದೇನೆ. ಹೆಚ್ಚಿನ ಲಾಭ ಬಂದಾಗ ಅದರಲ್ಲಿ ಒಂದಂಶವನ್ನು ಅವರಿಗೆ ನೀಡಿದ್ದೇನೆ. ನನ್ನ ಪತಿಯ ಇಚ್ಛೆಯಂತೆ ಕೆಲಸದವರಿಗೆ ಮನೆ ಕಟ್ಟಲಿಕ್ಕಾಗಿ ಸಹಾಯಧನ ನೀಡಿದ್ದೇನೆ.

ಬಾಬಣ್ಣ : (ದೂರದಲ್ಲಿ ಕೆಲಸ ಮಾಡುತ್ತಿದ್ದವರು ಹತ್ತಿರ ಬಂದು) ನೋಡಿ ನೈನಾರವರೇ! ದಾಖಲೆಯಲ್ಲಿ ಈ ತೋಟ ಪಾರ್ವತಮ್ಮನ ಹೆಸರಲ್ಲಿರಬಹುದು. ವಾಸ್ತವವಾಗಿ ನಮ್ಮೆಲ್ಲರದು. ಪಾರ್ವತಿಎಂದೂ ಭೇದ ತೋರಿಲ್ಲ.

ಪಾರ್ವತಿ : ಮರೆತೇಬಿಟ್ಟೆ. ನೀವು ಬಾಯಾರಿಕೆ ತೆಗೆದುಕೊಳ್ಳಿ.

(ರಾಧಣ್ಣ ಸೀಯಾಳ, ಬಾಳೆಹಣ್ಣುಗಳನ್ನು ತಂದಿರಿಸುತ್ತಾನೆ)

ಮೀನಾ : ತುಂಬಾ ಒಳ್ಳೆಯ ಆದರ್ಶ ನಿಮ್ಮದು. ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥಮಾಡಿಕೊಂಡಿರುವಿರಿ. ನಿಮ್ಮನ್ನು ನೋಡಿ ಉಳಿದವರೂ ಕಲಿಯಬೇಕು. ನಿಮ್ಮ ಸಾಧನೆ ಎಲ್ಲರಿಗೂ ಪ್ರೇರಣೆಯಾಗಬೇಕು. ಈ ಸಮಾಚಾರವನ್ನು ಇಡೀ ನಾಡಿಗೆ ತಿಳಿಸಬೇಕೆಂದಿದ್ದೇವೆ. ನಾವಿನ್ನು ಹೊರಡುತ್ತೇವೆ.

(ಎಲ್ಲರೂ ಬೀಳ್ಕೊಡುವರು)

- ❒ ಶಂಕರರಾಯರು ಭೂಮಿಯನ್ನು ಚಿನ್ನವಾಗಿಸಿದ್ದು ಹೇಗೆ? ಟಿಪ್ಪಣಿ ಬರೆಯಿರಿ.
- ❒ ನೀವು ಕಂಡ ಒಂದು ತೋಟದ ವರ್ಣನೆ ಬರೆಯಿರಿ.
- ❒ 'ಪ್ರಯಾಸದ ಕೆಲಸಗಳಲ್ಲಿ ಜನರ ಒಲವು ಕಡಿಮೆಯಾಗುತ್ತಿದೆ' ನೀವು ಈ ಹೇಳಿಕೆಯನ್ನು ಒಪ್ಪುವಿರಾ? ಚರ್ಚಿಸಿ ಟಿಪ್ಪಣಿ ಬರೆಯಿರಿ.
- ❒ ಮಾಧವಣ್ಣನಿಂದ ಭೂಮಿ ಪಡೆದ ನಂತರ ಶಂಕರರಾಯರ ಮರಣದವರೆಗಿನ ಘಟನೆಗಳನ್ನು ಕಥೆಯಾಗಿ ಕಲ್ಪಿಸಿ ಬರೆಯಿರಿ.
- ❒ ಈ ನಾಟಕವನ್ನು ಅಭಿನಯಿಸಿರಿ.

❖❖❖

